ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
Government of Karnataka
Department of Collegiate Education

NO. 1, 2nd Floor, DTE Building, Palace Road, Bangalore - 560 001; Phone: 080 22263327; email: bngcce@kar.nic.in

ಸಂಖ್ಯೆ:ಕಾಶಿಇ/ಶೈವಿ/100/ಕ.ಆ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 03.10.2018

**ಅತಿ ಜರೂರು**

## ಸುತ್ತೋಲೆ

ವಿಷಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.
ಉಲ್ಲೇಖ: ಡಾ.ವೀರಶೆಟ್ಟಿ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: ಕಅಪ್ರಾ/ಆಕಾ/227/2018, ದಿನಾಂಕ: 22.09.2018.

******

ದಿನಾಂಕ: 11.09.2018 ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು, ಇಲಾಖೆಯ ಮಾನ್ಯ ಆಯುಕ್ತರೊಂದಿಗೆ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದ್ದು, ಈ ಕೂಡಲೇ ಜಾರಿಗೊಳಿಸಬೇಕಾದ ಕೆಲವು ಕನ್ನಡಪರ ಶಿಫಾರಸ್ಸುಗಳನ್ನು ಮಾಡಿರುತ್ತಾರೆ.

ಇವುಗಳಲ್ಲಿ ಮುಖ್ಯವಾಗಿ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಖಾಸಗಿ ಅನುದಾನಿತ ಮತ್ತು ಸ್ವಾಯತ್ತ ಕಾಲೇಜುಗಳ ಅಂತರ್ಜಾಲ ತಾಣಗಳ ಮುಖಪುಟ ಹಾಗೂ ಒಳಪುಟಗಳು ಕನ್ನಡೇತರವಾಗಿದ್ದು, ರಾಜ್ಯದ ಎಲ್ಲಾ ಕಾಲೇಜುಗಳ ಅಂತರ್ಜಾಲ ತಾಣಗಳನ್ನು ಕೂಡಲೇ ಕಡ್ಡಾಯವಾಗಿ ಕನ್ನಡೀಕರಿಸುವಂತೆ, ಎಲ್ಲಾ ಮಾಹಿತಿಗಳನ್ನೂ ಕನ್ನಡದಲ್ಲೇ ನೀಡುವಂತೆ ಹಾಗೂ ಆಯ್ಕೆಭಾಷೆಯಾಗಿ ಇಂಗ್ಲೀಷ್ ಭಾಷೆಯನ್ನು ನೀಡುವಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಈ ಸಂಬಂಧ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಖಾಸಗಿ ಅನುದಾನಿತ ಮತ್ತು ಸ್ವಾಯತ್ತ ಕಾಲೇಜುಗಳ ಅಂತರ್ಜಾಲ ತಾಣದ ಎಲ್ಲಾ ಪುಟಗಳನ್ನು ಒಂದು ತಿಂಗಳೊಳಗೆ ಕನ್ನಡೀಕರಣಗೊಳಿಸುವಂತೆ ಕ್ರಮ ಕೈಗೊಂಡು, ಆಯಾ ವಲಯದ ಖಾಸಗಿ ಅನುದಾನಿತ ಕಾಲೇಜುಗಳಿಂದ ಅನುಷ್ಠಾನದ ಕುರಿತು ವರದಿಯನ್ನು ಪಡೆಯುವಂತೆ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸಲಾಗಿದೆ. ಖಾಸಗಿ ಅನುದಾನಿತ ಮತ್ತು ಸ್ವಾಯತ್ತ ಕಾಲೇಜುಗಳಿಂದ ಸ್ವೀಕೃತವಾದ ವರದಿಗಳನ್ನು ಕ್ರೋಢೀಕರಿಸಿ, ತಮ್ಮ ವ್ಯಾಪ್ತಿಯ ಖಾಸಗಿ ಅನುದಾನಿತ ಕಾಲೇಜುಗಳ ಪಟ್ಟಿಯಲ್ಲಿ ಜಾಲತಾಣಗಳನ್ನು ಪೂರ್ಣವಾಗಿ ಕನ್ನಡೀಕರಣಗೊಳಿಸಿದ ಕಾಲೇಜುಗಳ ವಿವರವನ್ನು ನಮೂದಿಸಿ ವರದಿಯನ್ನು ಕೇಂದ್ರ ಕಛೇರಿಗೆ ದಿನಾಂಕ: 26-10-2018ರೊಳಗೆ ಇಮೇಲ್: dce.academic@gmail.com / dce.itsection@gmail.comಗೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಇಮೇಲ್: chairman.kanpra@gmail.comಗೆ ಕಳುಹಿಸುವ ಮೂಲಕ ಸಲ್ಲಿಸಲು ಸೂಚಿಸಲಾಗಿದೆ.

ಈ ವಿಷಯವನ್ನು ಅತಿ ಮುಖ್ಯ ಮತ್ತು ಅತಿ ಜರೂರು ಎಂದು ಪರಿಗಣಿಸಿ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

3-10-18
ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ,**

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ & ಕಲಬುರಗಿ – ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ: 206, 2ನೇ ಮಹಡಿ, ವಿಧಾನಸೌಧ, ಬೆಂಗಳೂರು-560001 – ಮಾಹಿತಿಗಾಗಿ
3. ಕಛೇರಿ ಪ್ರತಿಗಳು.

JD circular KAP (1)